## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 33 (322)
2. ಸದಸ್ಯರ ಹೆಸರು : ಡಾ: ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 06.03.2025.
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಳಗಾವಿ ಜಿಲ್ಲೆ ಕಾಗವಾಡ ತಾಲ್ಲೂಕಿನ ಮಂಗಸೂಳಿ ಗ್ರಾಮದ ಭೂಮಿಗಳನ್ನು ಐನಾಪೂರ ಏತ ನೀರಾವರಿ ಕಾಮಗಾರಿಗೆ ಭೂಸ್ವಾಧೀನ ಪಡಿಸಿಕೊಂಡಿದ್ದು, ರೈತರಿಗೆ ಇದುವರೆವಿಗೂ ಭೂ ಪರಿಹಾರ ಧನ ನೀಡದಿರಲು ಕಾರಣವೇನು; | ಬೆಳಗಾವಿ ಜಿಲ್ಲೆ ಕಾಗವಾಡ ತಾಲ್ಲೂಕಿನ ಐನಾಪೂರ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಹಂತ 2 ರ ಜಾಕ್‌ವೆಲ್ ಪಂಪ್ ಹೌಸ್ ಹಾಗೂ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಗೆ ಒಟ್ಟು 06 ಪ್ರಕರಣಗಳಲ್ಲಿ 134 ಎಕರೆ-35 ಗುಂಟೆ ಜಮೀನಿನ ಭೂಸ್ವಾಧೀನ ಕುರಿತು ಪ್ರಕರಣಗಳಿಗೆ ಸಂಬಂಧಿಸಿದಂತೆ ಐತೀರ್ಪು ರಚನೆಗೆ ಬಾಕಿ ಇದ್ದು, ಐತೀರ್ಪು ಅನುಮೋದನೆಯಾದ ನಂತರ ಭೂಪರಿಹಾರ ಧನವನ್ನು ವಿತರಿಸಲು ಕ್ರಮ ವಹಿಸಲಾಗುವುದು. |
| ಆ) | ಐನಾಪೂರ ಏತ ನೀರಾವರಿ ಯೋಜನೆಯ ಎರಡನೇ ಹಂತದ ಪೂರ್ವ ಕಾಲುವೆ ನಿರ್ಮಾಣಕ್ಕೆ ಮಂಗಸೂಳಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು ಯಾವಾಗ; ಭೂಪರಿಹಾರ ಧನ ನೀಡದಿರುವುದರಿಂದ ರೈತರು ಸಂಕಷ್ಟಕ್ಕೀಡಾಗಿ ಧರಣಿ ಸತ್ಯಾಗ್ರಹ ನಡೆಸಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಐನಾಪೂರ ಏತ ನೀರಾವರಿ ಯೋಜನೆಯ ಭೂಸ್ವಾಧೀನವನ್ನು 2021-22 ರಲ್ಲಿ ಮಾಡಿಕೊಳ್ಳಲಾಗಿದೆ.<br><br>ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಲಂ 11(1) ರಡಿಯಲ್ಲಿ ರೂ.1,55,08,247/- ಗಳ ಮೊತ್ತವು ಬಿಡುಗಡೆಯಾಗಿದ್ದು, ಕಲಂ 19(1) ರಡಿಯಲ್ಲಿ ಪ್ರಕರಣವನ್ನು ಅಂತಿಮಗೊಳಿಸಲು ಇನ್ನೂ ಅಂದಾಜು ರೂ.6,65,55,000/- ಗಳ ಅವಶ್ಯಕತೆಯಿದ್ದು, ಸದರಿ ಅನುದಾನವು ನಿಗಮದಲ್ಲಿ ಲಭ್ಯವಿದ್ದು, ಮೇಲಿನ 06 ಪ್ರಕರಣಗಳಲ್ಲಿ ಐತೀರ್ಪಿಗಾಗಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. |
| ಇ) | ಈ ರೈತರಿಗೆ ಭೂ ಪರಿಹಾರ ಧನವನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು? | ಐತೀರ್ಪು ಅನುಮೋದನೆಯಾದ ನಂತರ ಭೂಪರಿಹಾರ ಧನವನ್ನು ವಿತರಿಸಲು ಕ್ರಮ ವಹಿಸಲಾಗುವುದು. |

**ಸಂಖ್ಯೆ: ಜಸಂಇ 12 ಡಬ್ಲ್ಯೂಎಲ್ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**